ಶ್ರೀ ಎಂ. ಎಸ್. ಕೃಷ್ಣನ್.—ಮಿನಿಮಂ ಕ್ವಾಲಿಫಿಕೇಷನ್ ನಿಗದಿ ಮಾಡಿದ್ದೀರಿ. 172 ಜನ ಇಂಟರ್‌ವ್ಯೂಗೆ ಬಂದಿದ್ದಾರೆ. ಅದರಲ್ಲಿ ತಮಗೆ ಬೇಕಾದದ್ದು 170 ಹುದ್ದೆಗಳು. ಅದರಲ್ಲಿ ಕೇವಲ 25 ಜನರನ್ನು ಸೆಲೆಕ್ಟ್ ಮಾಡಿರುವುದು ಏತಕ್ಕೆ?

ಶ್ರೀ ಕೆ. ಹೆಚ್. ಪಾಟೀಲ್.—ನಮಗೆ ಬೇಕಾಗಿರುವುದು ಸುಮಾರು 7–8 ನೂರು ಜನರು. ಅದರಲ್ಲಿ 457 ಜನರಿಂದ ಅರ್ಜಿಗಳು ಬಂದಿರುವುದು ಅದು ಕೇವಲ ಒಂದು ಜಿಲ್ಲೆಗೆ ಮಾತ್ರ. ಎಲ್ಲಾ ಜಿಲ್ಲೆಗೆ ಸುಮಾರು 20—30 ಸಾವಿರ ಅರ್ಜಿಗಳು ಸಂಗ್ರಹವಾಗಿವೆ. ಅದರಲ್ಲಿ ಒಂದು ಹುದ್ದೆಗೆ ಆರು ಮಂದಿಯಂತೆ ಅವರವರ ಮಾರ್ಕ್ಸ್ ಸ್ಟ್ಯಾಂಡರ್ಡ್ ನೋಡಿ ಇಂಟರ್‌ವ್ಯೂಗೆ ಕರೆಯುತ್ತಾರೆ. ಇಂಟರ್‌ವ್ಯೂ ಮಾಡಬೇಕಾದರೆ ಅದಕ್ಕೆ ಒಂದು ಕಮಿಟಿ ಇರುತ್ತದೆ. ಅವರು ಇಂಟರ್‌ವ್ಯೂ ಮಾಡಿ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುತ್ತಾರೆ.

ಶ್ರೀ ಎಫ್. ಎಸ್. ತಾವರೆ.—ಗ್ರಾಮಸೇವಕರ ಹುದ್ದೆಗೂ ಕೂಡ ತಾವು ಮೆರಿಟ್ ಅನ್ನು ಇಟ್ಟುಕೊಂಡಿರುವುದರಿಂದ ರೈತರ ಮಕ್ಕಳಿಗೆ ಈ ಒಂದು ಅವಕಾಶ ಸಿಕ್ಕದೆ ಪಹರದವರ ಮಕ್ಕಳೇ ಇದರಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹೆಚ್. ಪಾಟೀಲ್.—ಆ ಬಗ್ಗೆ ನಾವು ಪರೀಕ್ಷೆ ಮಾಡಿಲ್ಲ. ಆ ರೀತಿ ಏನಾದರೂ ಬಂದಿದ್ದರೆ ಅದು ಅನಿವಾರ್ಯ. ಗ್ರಾಮಸೇವಕರ ಹುದ್ದೆಗೆ ಬರೀ ಹಳ್ಳಿಯವರೇ ಇರಬೇಕು ಎಂದು ಸಭೆ ಒಪ್ಪುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

RURAL INDUSTRIAL PROJECT

4 SRI S.M. SHEERANALY CHANDRASEKHAR (Hosanagar).- Will the Minister for Industries be pleased to state :-

(*a*) whether there is any project by name Rural Industrial project in the Industries Department;

(*b*) if so, the items included in the said project;

(*c*) the number of Joint Directors, Deputy Directors and Assistant Directors attached to the said project and nature of their duties and functions;

(*d*) the number of Directors and Assistant Directors working in Shimoga District under the said project;

(*e*) whether these officers have taken up investigation of any project in the district; if so, the result of their investigation with details?

SRI S. M KRISHNA.—(Minister for Industries)

(*a*) Yes

(*b*) The important activities of this project are:

(1) training of rural artisans

(2) supply of improved tools and equipments at subsidised rates.

(3) conducting study tours for the benefits of artisans and entrepreneurs.

(4) starting of common facility centres for the benefit of rural artisans and

(5) starting of small scale industries with Government assistance and taking up commercial schemes etc.

(*c*) Joint Director 1

Deputy Director-cum-Project Officer 7

Assistant Directors :—

No Assistant Directors posts in the Project level, but Planning-cum-Survey Officer and Technical Assistants having the grade of pay of Assistant Directors are working in the Projects.

One Assistant Director is working in the Head Office.

*Regarding nature of their duties and functions-*vide* Statement-I placed on the Table of the House.

(*d*) Directors	....	Nil
*Assistant Directors	....	Nil

(*e*) Yes. The Techno-Economic Survey of the projects covering the entire District has been taken up and completed and it will be got approved from Government of India. With regard to working of the project, a latest progress report is placed on the Table of the House.* Investigation of any project prepared by the entrepreneurs will be taken up by the project staff provided they approach for assistance.

ಶ್ರೀ ಎಸ್. ಎಂ. ಶೀಕನಾಳಿ ಚಂದ್ರಶೇಖರ್ :—ತಾವು ನನ್ನ 'ಬಿ' ಪ್ರಶ್ನೆಗೆ ಉತ್ತರ ಕೊಡುತ್ತಾ ರೂರಲ್ ಇಂಡಸ್ಟ್ರೀಸ್ ಪ್ರಾಜೆಕ್ಟಿನ ಕಾರ್ಯ ವ್ಯಾಪ್ತಿಯನ್ನು ಹೇಳಿದ್ದೀರಿ, ಇದುವರೆಗೂ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಂತೆ ತಾವು ಎಷ್ಟು ರೂರಲ್ ಇಂಡಸ್ಟ್ರೀಸ್‌ಗಳನ್ನು ಸ್ಥಾಪನೆ ಮಾಡಿದ್ದೀರಿ ?

†ಶ್ರೀ ಎಸ್ ಎಂ. ಕೃಷ್ಣ : ಈ ಪ್ರಶ್ನೆ ನಾಲ್ಕಾರು ಜಿಲ್ಲೆಗಳಿಗೆ ಸಂಬಂಧಿಸಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ರೂರಲ್ ಇಂಡಸ್ಟ್ರೀಸ್‌ಗಳನ್ನು ಸ್ಥಾಪನೆ ಮಾಡಿದ್ದೀರಿ ಎಂದು ಪ್ರತ್ಯೇಕ ಪ್ರಶ್ನೆಯನ್ನು ತಾವು ಕೇಳಿದ್ದರೆ ಉತ್ತರವನ್ನು ಒದಗಿಸಿ ಕೊಡುತ್ತಿದ್ದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ರೂರಲ್ ಇಂಡಸ್ಟ್ರೀಸ್ ಅನ್ನು ಸ್ಥಾಪನೆ ಮಾಡುವಾಗ ಸೊಸೈಟಿಗಳನ್ನು ಮಾಡಿಕೊಂಡು, ಪ್ರಮೋಟರ್ಸ್ ಮಾಡಿ, ರಿಪೋರ್ಟ್ ಕಳುಹಿಸಿದರೂ ಕೂಡ ಆ ಬಗ್ಗೆ ಯಾವ ತರಹದ ಆಸಕ್ತಿಯನ್ನು ತೋರಿಸದೆ ಇರತಕ್ಕಂಥ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ ;—ಇದು ಮೊದಲನೆಯ ಬಾರಿಗೆ ಈಗ ನನ್ನ ಗಮನಕ್ಕೆ ಬರುತ್ತಾ ಇದೆ. ಅಂಥ ನಿದರ್ಶನಗಳು ಯಾವುದಾದರೂ ಇದ್ದರೆ, ಅದರ ಬಗ್ಗೆ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :— ನನ್ನ ಪ್ರಶ್ನೆಯ (ಬಿ) ಭಾಗದಲ್ಲಿ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ಕೇಳಿದ್ದೇನೆ. 1972-73 ನೇ ಸಾಲಿನಲ್ಲಿ ಅಲ್ಲಿ ಈ ಬಗ್ಗೆ ಏನು ಏನು ಕೆಲಸ ನಡೆದಿದೆ ಎನ್ನುವುದನ್ನು ಹೇಳಲು ಕ್ಯಾಗುತ್ತದೆಯೇ ?

---

*Copy placed in the Mysore Legistative library *vide* No. 6 dated 3-9-73.

ಶ್ರೀ ಎಸ್. ಎಂ. ಕೃಷ್ಣ : ಶಿವಮೊಗ್ಗ ಜಿಲ್ಲೆಯಲ್ಲಿಯೂ ಕೂಡ ಟೆಕ್ನೋ ಎಕಾನಾಮಿಕ್ ಸರ್ವೆಯನ್ನು ರೂರಲ್ ಇಂಡಸ್ಟ್ರೀಸ್‌ನ ಡೆಪ್ಯೂಟಿ ಡೈರೆಕ್ಟರ್ ಅವರು ಮಾಡಿದ್ದಾರೆ. As a follow up action to that techno-economic survey, certain steps are being taken.

ಶ್ರೀ ಕಾಗೋಡು ತಿಮ್ಮಪ್ಪ : (ಆ) ಪ್ರಶ್ನೆಗೆ ಉತ್ತರವಾಗಿ, ಈ ಯೋಜನೆಯ ಚಟುವಟಿಕೆಗಳಲ್ಲಿ ಐದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಇದರಲ್ಲಿ ಎಷ್ಟು ಕಾರ್ಯಕ್ರಮಗಳನ್ನು [redacted]ಮ್ಮ ಅಧಿಕಾರಿಗಳು ಕಾರ್ಯಗತಗೊಳಿಸುವಲ್ಲಿ ಅಸಕ್ತಿಯನ್ನು ವಹಿಸಿದ್ದಾರೆ ?

ಶ್ರೀ ಎಸ್. ಎಂ. ಕೃಷ್ಣ : ಕೆಲವು ಕಡೆ ಆರ್ಟಿಸಾನ್ ತರಬೇತಿ ಶಿಬಿರಗಳನ್ನು ನಡೆಸಿದ್ದಾರೆ. ಕಾಮನ್ ಫೆಸಿಲಿಟೀಸ್ ಸೆಂಟರ್‌ಗಳನ್ನು ಮಾಡಿದ್ದಾರೆ. ಎಲ್ಲೆಲ್ಲಿ ಎಷ್ಟು ಎಷ್ಟು ಸೆಂಟರುಗಳನ್ನು ಮಾಡಿದ್ದಾರೆ ಎಂದು ನಿಗದಿಯಾಗಿ ಹೇಳಲಿಕ್ಕೆ ಬರುವುದಿಲ್ಲ. ಆದರೆ ಸಾಧಾರಣವಾಗಿ, ರೂರಲ್ ಇಂಡಸ್ಟ್ರೀಸ್‌ನ ಉದ್ದೇಶ ಏನೆಂದರೆ, ಗ್ರಾಮಾಂತರ ಜನಗಳಿಗೆ, ಅವರಲ್ಲಿ ಔದ್ಯೋಗಿಕ ಮನೋಭಾವನೆ ಬೆಳೆಯುವುದಕ್ಕೆ ಸಹಾಯಕವಾಗುವಂಥ ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡುವುದಕ್ಕೆ ಈ ಪಾಜೆಕ್ಟನ್ನು ಕಲ್ಪಿಸಿಕೊಂಡಿದ್ದಾರೆ. ಮುಖ್ಯವಾಗಿ ಹಳ್ಳಿಗಾಡಿನ ಜನಗಳನ್ನು ಉದ್ಯೋಗದದಾರಿಗೆ ತೆಗೆದುಕೊಂಡು ಬರುವುದಕ್ಕೆ ಇದನ್ನು ಹೂಡಿದ್ದೇವೆ. ಈ ಯೋಜನೆಯು ಯಶಸ್ವಿಯಾಗಬೇಕಾದರೆ, ಯಾರು ಔದ್ಯೋಗೀಕರಣ ಮಾಡಬೇಕು ಎಂದು ಹೇಳಿ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೋ, ಮತ್ತು ಯಾರು ಇದರಲ್ಲಿ ಆಸಕ್ತಿಯನ್ನು ವಹಿಸುತ್ತಾರೋ ಅಂಥವರ ಆಸಕ್ತಿಯ ಮೇಲೆ ಇದರ ಯಶಸ್ಸು ನಿಲ್ಲುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು:- ಗ್ರಾಮಾಂತರ ಕಸುಬುಗಳು ಯಾವುವು, ಇದರಲ್ಲಿ ಎಷ್ಟೆಷ್ಟು ಜನರಿಗೆ ತರಬೇತಿಯನ್ನು ಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ವಿವರಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಸ್. ಎಂ. ಕೃಷ್ಣ:- ಗ್ರಾಮಾಂತರ ಉದ್ಯೋಗಗಳು ಯಾವುವು ಎನ್ನುವುದು ಸರ್ವೇ ಸಾಧಾರಣವಾಗಿ ತಮಗೆ ಗೊತ್ತಿರತಕ್ಕ ವಿಚಾರ. ಇದರಲ್ಲಿ ಪೌಲ್ಟ್ರಿ ಇದೆ, ಇನ್ನೂ ಕೆಲವು ಕಸುಬುಗಳಿಗೆ ಸಾಕಾದಷ್ಟು ಜನ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಎಷ್ಟು ಶಿಬಿರಗಳನ್ನು ಮಾಡಿದ್ದೇವೆ, ಮತ್ತು ಎಷ್ಟು ಜನರಿಗೆ ತರಬೇತಿ ಕೊಟ್ಟಿದ್ದೇವೆನ್ನುವುದಕ್ಕೆ ತಾವು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಸ್. ಎಂ ಕೃಷ್ಣನ್:- ಈಗ ತಾವು ಎಲ್ಲೆಲ್ಲಿ ರೂರಲ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಪ್ರಾಜಿಕ್ಟ ಅನ್ನು ತೆಗೆದುಕೊಂಡಿದ್ದೀರೊ ಅಲ್ಲಲ್ಲಿ ಟೆಕ್ನೋ ಎಕನಾಮಿಕ್ ಸರ್ವೆಯನ್ನು ಮಾಡಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ: ಮೂರು ಜಿಲ್ಲೆಗಳಲ್ಲಿ ನಾವು ಟೆಕ್ನೋ ಎಕನಾಮಿಕ್ ಸರ್ವೆಯನ್ನು ಮಾಡಿದ್ದೇವೆ. ಒಂದು ಧಾರವಾಡ, ತುಮಕೂರು, ಮತ್ತು ಇನ್ನೊಂದು ಜಿಲ್ಲೆಯಲ್ಲಿ ಸರ್ವೆ ಕೆಲಸ ಮುಗಿದಿದೆ. ಅದರ ಫಾಲೋ ಅಪ್ ಆಕ್ಷನ್ ನಡೆಯುತ್ತಿದೆ. ಹೊಸದಾಗಿ ಬಿಜಾಪುರ, ಹಾಸನ ಮತ್ತು ಬೀದರ್ ಜಿಲ್ಲೆಗಳಲ್ಲಿಯೂ ಕೂಡ ರೂರಲ್ ಇಂಡಸ್ಟ್ರೀಸ್ ಪ್ರಾಜಿಕ್ಟ್ ಎಕ್ಸ್‌ಟೆಂಜ್ ಮಾಡಬೇಕು ಎಂದು ಮತ್ತು ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ತೆಗೆದು ಕೊಳ್ಳಬೇಕು ಎಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅಲ್ಲಿ ಟೆಕ್ನಿಕಲ್ ಸರ್ವೆಯ ರಿಪೋರ್ಟನ್ನು ತಯಾರು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ:- ಗ್ರಾಮಾಂತರ ಕೈಗಾರಿಕಾ ಯೋಜನೆಯ ಟೆಕ್ನೋ ಎಕನಾಮಿಕ್ ಸರ್ವೆ ಮಾಡಿ ಅನೇಕ ಕಡೆ ರಿಪೋರ್ಟ್ ಕಳುಹಿಸಿದ್ದಾರೆ. ಇದನ್ನು ಕಾರ್ಯಗತ ಮಾಡುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ ? ಹಾಗೂ ನನ್ನ (ಡಿ) ಪ್ರಶ್ನೆಗೆ ಉತ್ತರವಾಗಿ, ತಾವು ನಿಲ್ ಎಂದು ಹೇಳಿದ್ದೀರಿ, ಯಾವ ಯಾವ ಆಫೀಸರ್ಸ್ ಅನ್ನು ಈ ಪ್ರಾಂತ್ಯಕ್ಕೆ ನೇಮಕ ಮಾಡಿದ್ದೀರಿ, ಅವರು ಏನು ಕಾರ್ಯ ಮಾಡುತ್ತಿದ್ದಾರೆ ?

ಶ್ರೀ ಎಸ್. ಎಂ. ಕೃಷ್ಣ: ಪ್ರತಿಯೊಂದು ರೂರಲ್ ಇಂಡಸ್ಟ್ರಿಯಲ್ ಪ್ರಾಜೆಕ್ಟನಲ್ಲಿಯೂ ಕೂಡ ಒಬ್ಬ ಡೆಪ್ಯೂಟಿ ಡೈರೆಕ್ಟರ್ ಇದ್ದಾರೆ. ಅವರ ಕೆಳಗೆ, ಪ್ರಾಜಿಕ್ಟ ಆಫೀಸರ್ಸ್, ಪ್ಲಾನಿಂಗ್ ಮತ್ತು ಸರ್ವೆ ಆಫೀಸರ್ಸ್, ನಾಲ್ಕು ಜನ ಟೆಕ್ನಿಕಲ್ ಅಸಿಸ್ಟೆಂಟ್ಸ್, ನಾಲ್ಕು ಜನ ಇಂಡಸ್ಟ್ರಿಯಲ್ ಪ್ರಮೋಷನ್ ಆಫೀಸರ್ಸ್, ಹೀಗೆ ನಾನಾ ವಿಧವಾದಂಥ ಅಧಿಕಾರಿಗಳು ಇದ್ದಾರೆ. ಅವರೆಲ್ಲರ ಸಹಾಯ ಮತ್ತು ಇವರಿಗೆ ಒಂದು ಜೀಪನ್ನೂ ನಾವು ಒದಗಿಸಿಕೊಟ್ಟಿದ್ದೇವೆ. ಅದರೆ ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ, ರೂರಲ್ ಇಂಡಸ್ಟ್ರೀಸ ಪ್ರಾಜಿಕ್ಟ ಎಷ್ಟರ ಮಟ್ಟಿಗೆ ಗ್ರಾಮಾಂತರ ಜನಗಳಿಗೆ ಅನುಕೂಲವನ್ನು ಒದಗಿಸಿ ಕೊಡಬೇಕಾಗಿತ್ತೋ ಅಷ್ಟನ್ನು ಒದಗಿಸಿಕೊಟ್ಟಿಲ್ಲ ಎನ್ನತಕ್ಕದ್ದು. ಅದರಲ್ಲಿ ಜಡತ್ವ ಇದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಸಚೇತನಗೊಳಿಸುವುದಕ್ಕೆ ಕೆಲವು ಕಾರ್ಯಕ್ರಮಗಳನ್ನು ನಾವು ಹಾಕಿಕೊಳುತ್ತೇವೆ.

MADAM SPEAKER.- Question No. 5 by Sri S. M. Sheernaly Chandsasekhar is held over because the hon. Minister for Public Health is not in station. Next Question.